733 (548) ಶ್ರೀ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) ಮಾನ್ಯ ಯೋಜನೆ, ಸಣ್ಣ ಉಳಿತಾಯ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಡಾ ನಂಜುಂಡಪ್ಪನವರ ವರದಿಯನ್ವಯ ರಾಜ್ಯದಲ್ಲಿರುವ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗಾಗಿ ಸರ್ಕಾರವು ಕೈಗೊಂಡ ಕ್ರಮಗಳಾವುವು ,

ಆ) ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗಾಗಿ ಕ್ರಿಯಾ ಯೋಜನೆಯನ್ನು ಸರ್ಕಾರ ತಯಾರಿಸಲಾಗಿದೆಯೇ , (ವಿವರ ನೀಡುವುದು) ?

ಶ್ರೀ ರಾಮಚಂದ್ರಗೌಡ (ಯೋಜನಾ ಸಚಿವರು, ಸಣ್ಣ ಉಳಿತಾಯ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರು)

ಅ) ಪ್ರಾದೇಶಿಕ ಅಸಮತೋಲನ ನಿವಾರಣ ಉನ್ನತಾಧಿಕಾರ ಸಮಿತಿಯು 114 ತಾಲ್ಲೂಕುಗಳನ್ನು ಅತ್ಯಂತ ಹಿಂದುಳಿದ ಅತೀ ಹಿಂದುಳಿದ ಹಾಗೂ ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಿ ಈ ತಾಲ್ಲೂಕುಗಳ ಅಭಿವೃದ್ಧಿಗೆ 16 ಸಾವಿರ ಕೋಟಿ ರೂ ಗಳ ವಿಶೇಷ ಅಭಿವೃದ್ಧಿ ಯೋಜನೆಯನ್ನು ಸಿದ್ದಪಡಿಸಲು ಶಿಫಾರಸ್ಸು ಮಾಡಿದೆ ಇದರ ಪೈಕಿ ಉತ್ತರ ಕರ್ನಾಟಕ ಪ್ರದೇಶಾಭಿವೃದ್ಧಿಗಾಗಿ ಬೇಕಾಗುವ ಹಣವು 9600 ಕೋಟಿ ರೂ ಗಳು ರಾಜ್ಯ ಸರ್ಕಾರವು ಇದರ ಕಡೆಯ ಪಕ್ಷ ಶೇ 50ರಷ್ಟು ಹಣದ ಸಹಾಯ ಮಾಡಲು ಕೇಂದ್ರ ಸರ್ಕಾರಕ್ಕೆ ಕೋರಿದೆ ಇದರ ಬಗ್ಗೆ ಭಾರತ ಸರ್ಕಾರದಿಂದ ಉತ್ತರವನ್ನು ನಿರೀಕ್ಷಿಸಲಾಗಿದೆ ಆದರೂ ಈ ತಾಲ್ಲೂಕುಗಳ ಅಭಿವೃದ್ಧಿಗೆ ರಾಜ್ಯ ಹಾಗೂ ಜಿಲ್ಲಾ ವಲಯ ಯೋಜನೆಗಳಿಂದ ಹಣವನ್ನು ಒದಗಿಸಲಾಗುತ್ತಿದೆ

ಆ) ಈ ತಾಲ್ಲೂಕುಗಳಿಗೆ ಕ್ರಿಯಾ ಯೋಜನೆಯನ್ನು ತಯಾರಿಸಲು ಕ್ರಮ ಕೈಗೊಳ್ಳಲಾಗಿದೆ

734 (749) ಶ್ರೀ ಎ ಬಿ ಪಾಟೀಲ್ (ಸಂಕೇಶ್ವರ) ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ ವ್ಯಾಪ್ತಿಯಲ್ಲಿ ಬರುವ ರೈತರ ಹೊಲಗಳಿಗೆ ಕಾಡಾನೆಗಳು ಇತ್ತೀಚೆಗೆ ದಾಳಿ ನಡೆಸಿ ಬೆಳೆ ಹಾನಿ ಮಾಡಿದ್ದಲ್ಲದೆ ಇಬ್ಬರು ರೈತರು ಆನೆಗಳ ಕಾಲ್ತುಳಿತಕ್ಕೆ ಸಿಕ್ಕಿ ಸತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಬಂದಿದ್ದಲ್ಲಿ, ರೈತರ ಬೆಳೆಹಾನಿಗೆ ಪರಿಹಾರ ನೀಡಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ ,

ಇ) ಮೃತ ರೈತರ ಕುಟುಂಬಕ್ಕೆ ಸರ್ಕಾರದಿಂದ ಎಷ್ಟು ಪರಿಹಾರ ನೀಡಲಾಗಿದೆ ,

ಈ) ಮಹಾರಾಷ್ಟ್ರ ಸರ್ಕಾರ ಆನೆ ತುಳಿತಕ್ಕೆ ಸಿಕ್ಕಿ ಸತ್ತವರ ಕುಟುಂಬಕ್ಕೆ ನೀಡುತ್ತಿರುವ ರೂ 2 ಲಕ್ಷಗಳ ಪರಿಹಾರ ಮೊತ್ತವನ್ನು ಇಲ್ಲಿ ಮೃತರಾದ ಕುಟುಂಬದವರಿಗೂ ಸಹ ನೀಡಲಾಗುವುದೇ ,